“ಸರಸವಾಣಿಯಂತಹ ಒಂದು ನಿಧಿಯನ್ನು ತೊರೆದುಹೋಗಲು ಮಂಡನ ಮಿಶ್ರರಿಗೆ ಹೇಗೆ ಮನಸ್ಸಾಯಿತು?”

“ನಿಜವಾಗಲೂ ವಾದದಲ್ಲಿ ಗೆದ್ದವರು ಯಾರು? ಸರಸವಾಣಿಯಾ, ಶಂಕರರಾ?”

ಎರಡು ಗಿಳಿಗಳು ಒಂದನ್ನೊಂದು ಕೇಳಿಕೊಂಡು ಚಟ್ಟೆಂದು ಕೆಲವು ಕ್ಷಣ ಮೌನವಾದವು.

ಮತ್ತೊಂದು ಗಿಳಿ ಮೆಲ್ಲಗೆ ಶುರು ಹಚ್ಚಿಕೊಂಡಿತು. “ನನಗೊಂದು ಸಂಶಯ ಇದೆ. ಸರಸವಾಣಿ ಬಹಳ ಬುದ್ಧಿವಂತೆ ಎಂದು ನಾನು ಅಂದುಕೊಳ್ಳುತ್ತೇನೆ... ತನ್ನ ಗಂಡನನ್ನು ಸನ್ಯಾಸಿಯಾಗಿಸಲು ಬಂದವರನ್ನೇ, ಅವಳು ಸ್ವಲ್ಪ ಕಾಲ ಸಂಸಾರಿಯಾಗಿಸಿಬಿಟ್ಟಳಲ್ಲವೇ! ಆದ್ದರಿಂದ ನಿಜವಾಗಲೂ ಜಯಿಸಿದ್ದು ಸರಸವಾಣಿಯೇ!

ಆದರೆ ಅದು ಹಾಗಲ್ಲವಂತಲ್ಲಾ? ಶಂಕರರು ಅವಳ ಬಳಿ ಹೇಳಿದ ವಿವರಣೆಗಳನ್ನು ಪೂರ್ತಿಯಾಗಿ ಕೇಳಿಸಿಕೊಂಡಿರಾ, ಇಲ್ಲವಾ? ಆತ್ಮ ಮಾತ್ರವೇ ಅವರದ್ದು. ಅನುಭವಿಸಿದ್ದು ಅಮರುಗನ ದೇಹವಂತೆ, ಅವರ ಆತ್ಮವಲ್ಲವಂತೆ.”

ಈಗ ಮೊದಲ ಗಿಳಿ ಮಧ್ಯೆ ಬಾಯಿ ಹಾಕಿತು. “ಅಲ್ಲೇ ನನ್ನ ಸಂಶಯ ಆರಂಭವಾಗುತ್ತದೆ. ದೇಹವನ್ನು ತೊರೆದು ಹೊಸ ದೇಹದೊಂದಿಗೆ ಅನುಭವಿಸಿ, ಮತ್ತೆ ಅಲ್ಲಿಂದ ಹೊರಬಂದ ಮೇಲೆ ಆ ಹೊಸ ದೇಹದಲ್ಲಿದ್ದ ಆತ್ಮ ಅನುಭವಗಳನ್ನು ಹೇಗೆ ನೆನಪಿಟ್ಟುಕೊಳ್ಳಲು ಸಾಧ್ಯ? ಅದು ಮಾತ್ರವಲ್ಲ, ಜೀವಾತ್ಮನೂ ಪರಮಾತ್ಮನೂ ಬೇರೆಬೇರೆ ಅಲ್ಲ ಎಂದಲ್ಲವೇ ಇವರ ಅದ್ವೈತ ಹೇಳುತ್ತದೆ? ಹಾಗಾದರೆ ದೇಹ ಬೇರೆ, ಆತ್ಮ ಬೇರೆ ಎಂದು ಹೇಗಾಗುತ್ತದೆ? ರಾಜನ ದೇಹದೊಂದಿಗೆ ಅನುಭವಿಸಿದರೇನು, ಸನ್ಯಾಸಿಯ ದೇಹದೊಂದಿಗೆ ಅನುಭವಿಸಿದರೇನು? ಎಲ್ಲಾ ಒಂದೇ ಅಲ್ಲವೇ? ಅದಕ್ಕೇಕೆ ಹೀಗೆ ಮತ್ತೊಂದು ದೇಹದೊಳಗೆ ನುಸುಳಿಕೊಂಡು, ಮತ್ತೆ ಹೊರಬರುವ ಬೇಕಿಲ್ಲದ ದೊಂಬರಾಟವಾಡಿ, ಎರಡೂ ದೇಹಗಳನ್ನು ಹಿಂಸೆಗೆ ಒಳಗಾಗಿಸುವುದು? ಅಪವಾದಕ್ಕೆ ಒಳಗಾಗಬಾರದೆಂದು ಅವರು ವಾದಿಸಬಹುದು. ಆದರೆ, ಸಕಲವನ್ನೂ ತೊರೆದ ಸನ್ಯಾಸಿಗೆ ಮಿಕ್ಕವರು ತನ್ನ ಬಗ್ಗೆ ಏನು ಮಾತನಾಡಿಕೊಳ್ಳುತ್ತಾರೆ ಎಂಬ ಚಿಂತೆ ಯಾಕೆ? ತನ್ನ ದೇಹ ಪರಿಶುದ್ಧವಾಗಿದೆ ಎಂದು ಜಗತ್ತಿಗೆ ತೋರಿಸಿಕೊಳ್ಳಬೇಕಾದ ಅವಶ್ಯಕತೆ ಏನು?”

ಇದನ್ನು ಕೇಳಿ, “ಏನೋಪ್ಪಾ ನನಗೆ ಯಾವುದೂ ನ್ಯಾಯವೆಂದು ಅನಿಸುತ್ತಿಲ್ಲ. ಈ ಆಟದ ಕೊನೆಯಲ್ಲಿ ಎರಡು ಹೆಣ್ಣುಗಳು ತಮ್ಮ ಸಂತೋಷವನ್ನು ಹಾಳುಮಾಡಿಕೊಂಡದ್ದಷ್ಟೆ ಕಾಣುವುದು” ಎಂದು ಎರಡನೆಯ ಗಿಳಿ ವಿರಕ್ತಿಯಿಂದ ಜಿಗುಪ್ಸೆಯ ಮಾತುಗಳನ್ನಾಡಿತು.

“ಒಬ್ಬಳು ಸರಸವಾಣಿ, ಗೊತ್ತು. ಮತ್ತೊಬ್ಬಳು ಯಾರು?” ಎಂದು ಕೇಳಿತು ಮೂರನೆಯ ಗಿಳಿ.

“ಅಮರುಗನ ಹೆಂಡತಿಯ ಬಗ್ಗೆ ಹೇಳುತ್ತಿದ್ದೇನೆ. ಸತ್ತುಹೋದ ಅವಳ ಗಂಡನಿಗೆ ಜೀವಕೊಟ್ಟು, ಅವಳು ಕಳೆದುಕೊಂಡ ಸಂತೋಷವನ್ನು ಮತ್ತೆ ಕೊಡಿಸಿ, ಮತ್ತೆ ಸ್ವಲ್ಪ ದಿನಗಳಲ್ಲಿಯೇ ಅದನ್ನು ಅವಳಿಂದ ಕಸಿದುಕೊಂಡು...” ಎಂದು ಇದಕ್ಕೆ ಮೊದಲು ಮಾತನಾಡಿದ ಗಿಳಿ ನಿಟ್ಟುಸಿರು ಬಿಟ್ಟಿತು.

“ನ್ಯಾಯವಾಗಿ ಸರಸವಾಣಿ ಈ ಪ್ರಶ್ನೆಗಳನ್ನೆಲ್ಲಾ ಅವರ ಮುಂದೆ ತೆಗೆಯಬೇಕಿತ್ತು. ಆದರೆ ಏಕೆ ಕೇಳಲಿಲ್ಲ?”

“ಅವಳು ಕೇಳಿದ ಪ್ರಶ್ನೆಗಳಿಗಿಂತಲೂ, ಕೇಳದ ಪ್ರಶ್ನೆಗಳೇ ಹೆಚ್ಚು ಶಕ್ತಿಯುತವಾಗಿವೆ. ಆದ್ದರಿಂದ, ವಾದ ಇನ್ನೂ ಪೂರ್ಣಗೊಳ್ಳಲಿಲ್ಲ” ಎಂದು ಎಲ್ಲಾ ಗಿಳಿಗಳೂ ಒಂದೇ ದನಿಯಲ್ಲಿ ಹೀಗೆ ಕಿರುಚಿದವು. “ಮಂಡನ ಮಿಶ್ರ ಸೋತು ಹೋದಾಗ, ಸರಸವಾಣಿ ಏನು ಹೇಳಿದಳು? ‘ಅವರ